ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue 2, March-April, 2024, Pp. 26-33.
©*IIMRD*, Mysuru
IIMRD JOURNALS
www.iimrd.com

# ಚಿತ್ರಕಲೆಯ ಮಹತ್ವ ಮತ್ತು ಇತರ ಲಲಿತಕಲೆಗಳೊಂದಿಗೆ ಚಿತ್ರಕಲೆಯ ತುಲನಾತ್ಮಕ ಅಧ್ಯಯನ

**ಎಂ.ಸಿ. ಸುಧಾಕರ**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಸಿದ್ಧಗಂಗಾ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ತುಮಕೂರು.

**ಸಾರಾಂಶ: (Abstract)**

*ಲಲಿತಕಲೆಗಳ ಮೂಲ, ಅಭಿವೃದ್ಧಿ, ಸೃಜನಾತ್ಮಕತೆ, ಅವುಗಳ ಭವಿಷ್ಯವು ಚಿತ್ರಕಲೆಯನ್ನು ಅವಲಂಬಿಸಿದೆ. ಪ್ರಪಂಚದ ಯಾವುದೇ ವಿಚಾರ ಸಮುದ್ರಯಾನ, ವೈದ್ಯಕೀಯ ರಂಗ, ತಂತ್ರಜ್ಞಾನ, ಭಾಷೆ, ಖಗೋಳಶಾಸ್ತ್ರ, ಭೌತಶಾಸ್ತ್ರ, ಶಿಲ್ಪಕಲೆ, ವಾಸ್ತುಕಲೆ ಹೀಗೆ ಯಾವುದೇ ಶಾಸ್ತ್ರವನ್ನು ಅಭಿವೃದ್ಧಿಪಡಿಸಲು ಮೊದಲು ನೀಲನಕ್ಷೆಯ ರೂಪದಲ್ಲಿ ಚಿತ್ರಕಲೆ ಬೇಕೇಬೇಕು. ಈ ನೀಲನಕ್ಷೆಯಿಂದಲೇ ಆ ವಿಷಯದಲ್ಲಿ ಮುಂದಿನ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸಿ ಕಾರ್ಯಪ್ರವೃತ್ತರಾಗಬೇಕಾಗಿರುತ್ತದೆ. ವಿಜ್ಞಾನಿಗಳಾಗಲಿ, ಕವಿಗಳಾಗಲಿ, ತಂತ್ರಜ್ಞರಾಗಲಿ, ಗಗನಯಾನಿಗಳಾಗಲಿ, ತಾವು ಊಹಿಸಿದ್ದನ್ನು ನೀಲನಕ್ಷೆಯ ರೂಪದಲ್ಲಿ ಚಿತ್ರಕಲೆಯಿಂದ ಸಿದ್ಧಪಡಿಸಿಯೇ ಮುಂದೆ ಯೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ. ಮಾನವನ ಮೊದಲ ಸಂವಹನ ಚಿತ್ರಕಲೆಯಿಂದ ನಡೆದಿದೆ. ಇಂದಿಗೂ ಚಿತ್ರಕಲೆಯು ಅನಕ್ಷರಸ್ಥರಿಗೂ ಸಹ ವಿಷಯವನ್ನು ಅರ್ಥೈಸುವಲ್ಲಿ ಯಶಸ್ವಿಯಾಗುತ್ತಿದೆ. ಪ್ರಾಚೀನಕಾಲದಿಂದಲೂ ಇಂದಿನವರೆಗೂ ಪ್ರಪಂಚದ ಅನೇಕ ಭಾಷೆಗಳಲ್ಲಿ ಚಿತ್ರಗಳಿರುವ ಅಕ್ಷರಗಳನ್ನು ನೋಡಬಹುದು. ಅಂದರೆ ಮುಂದೆ ಅನ್ಯಗ್ರಹಗಳ ಜೀವಿಗಳೊಂದಿಗೂ ಸಂವಹನ ನಡೆಸಲು ಸಹಾಯವಾಗುತ್ತದೆ. ಇಂತಹ ಚಿತ್ರಕಲೆಗೆ ಪ್ರಾಥಮಿಕ ಶಿಕ್ಷಣದಿಂದಲೇ ಔಪಚಾರಿಕ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಲಲಿತಕಲೆ, ಚಿತ್ರಕಲೆ, ಸಂವಹನ, ಕೌಶಲ್ಯ, ಸೃಜನಾತ್ಮಕತೆ, ಶಿಲ್ಪಕಲೆ, ವಾಸ್ತುಶಿಲ್ಪ.

## ಪೀಠಿಕೆ

ಐತಿಹಾಸಿಕವಾಗಿ ಲಲಿತಕಲೆಗಳಲ್ಲಿ ಮೊದಲು ಹುಟ್ಟಿದ್ದು ಚಿತ್ರಕಲೆ. ಇತರ ಲಲಿತಕಲೆಗಳೊಂದಿಗೆ ಹೇಗೆ ಭಿನ್ನವಾಗಿದೆ ಮತ್ತು ಪೂರಕವಾಗಿದೆ? ಚಿತ್ರಕಲೆ ಹುಟ್ಟಿಗೆ ಕಾರಣವೇನು? ಅದರ ಅವಶ್ಯಕತೆ ಮತ್ತು ಮಹತ್ವ ಮತ್ತು ಇತರ ಕಲೆಗಳಿಗೆ ಮಾತೃಸ್ಥಾನವನ್ನು ಪಡೆದಿರುವ ಚಿತ್ರಕಲೆ ಹಿಂದೆ ಹೇಗೆ ಬೆಳೆದಿದೆ, ಇಂದು ಹೇಗೆ ಎಲ್ಲೆಯೇ ಇಲ್ಲದ ಹಾಗೆ ಬೆಳೆದಿದೆ, ಬೆಳೆಯುತ್ತಿದೆ. ಅದರ ಉಪಯೋಗದ ಪ್ರಕಾರಗಳು ಮುಂತಾದವುಗಳ

*Please cite this article as: ಎಂ.ಸಿ. ಸುಧಾಕರ.* (2024). ಚಿತ್ರಕಲೆಯ ಮಹತ್ವ ಮತ್ತು ಇತರ ಲಲಿತಕಲೆಗಳೊಂದಿಗೆ ಚಿತ್ರಕಲೆಯ ತುಲನಾತ್ಮಕ ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, ಸಂಪುಟ–5, ವಿಶೇಷ ಸಂಚಿಕೆ–2. ಪು.ಸಂ. 26–33.*

ಐತಿಹಾಸಿಕ ಬೆಳವಣಿಗೆ ತಿಳಿಯಬೇಕಾಗಿದೆ. ಮೊದಲು ಮಾನವನ ಸಂವಹನಕ್ಕಾಗಿ ಗುಹೆಗಳು ಮತ್ತು ಬಂಡೆಗಳ ಮೇಲೆ ಗೆರೆಗಳ ರೂಪದಲ್ಲಿ ಪ್ರಾರಂಭಿಸಿದ ಚಿತ್ರಕಲೆ ಇಂದು ಖಗೋಳ ಶಾಸ್ತ್ರ, ವೈದ್ಯಕೀಯಶಾಸ್ತ್ರ, ವಾಸ್ತು ಕಲೆ, ನೃತ್ಯ ಕಲೆ, ಕಾವ್ಯ, ಸಂಗೀತ ಶಾಸ್ತ್ರ, ಗಣಕೀಕೃತ ಗ್ರಾಫಿಕ್ ಚಿತ್ರಕಲೆ, ಅನಿಮೇಷನ್ ಚಿತ್ರಕಲೆ, ಅಪರಾಧ ಶಾಸ್ತ್ರ, ವಿಧಿ ವಿಜ್ಞಾನ ಶಾಸ್ತ್ರ, ಭೌತ ಶಾಸ್ತ್ರ, ಗಣಿತ ಶಾಸ್ತ್ರ, ಸೌಂದರ್ಯ ಶಾಸ್ತ್ರ ಹೀಗೆ ಅನೇಕ ಶಾಸ್ತ್ರಗಳಿಗೆ ಪೂರಕವಾಗಿ ಸಹಾಯಕವಾಗುತ್ತಿರುವುದು ಚಿತ್ರಕಲೆ. ವಿಶ್ವದಲ್ಲಿ ಚಿತ್ರಗಾರರು ರಚಿಸಿರುವ ಚಿತ್ರಗಳು ಕೋಟ್ಯಾಂತರ ರೂಪಾಯಿ ಬೆಲೆಗೆ ಮಾರಾಟವಾಗುತ್ತಿವೆ ಎಂದರೆ ಅದರ ಮಹತ್ವ ತಿಳಿಯುವುದರೊಂದಿಗೆ ಭವಿಷ್ಯದಲ್ಲಿ ಚಿತ್ರಕಲೆಯಿಂದಾಗುವ ಉಪಯೋಗಗಳನ್ನು ತಿಳಿಯಬೇಕಾಗಿದೆ.

**ಚಿತ್ರಕಲೆಯ ಮಹತ್ವ**

ಭಾರತದ ಪ್ರಥಮ ಚಿತ್ರಕಲೆಯನ್ನು ಮಧ್ಯ ಪ್ರದೇಶದ ಜೋಗಿಪುರ ಗುಹೆಯ ಚಿತ್ರಗಳಲ್ಲಿ ಮತ್ತು ಕರ್ನಾಟಕದಲ್ಲಿ ಕೊಪ್ಪಳ ಪ್ರದೇಶದ ಗವಿ ವರ್ಣಚಿತ್ರಗಳು, ಗಂಗಾವತಿ ತಾಲ್ಲೂಕಿನ ರೇಖಾಚಿತ್ರಗಳು, ಬಳ್ಳಾರಿಯ ಗುಹೆಗಳಲ್ಲಿ ಸಮೂಹ ನೃತ್ಯ, ಮಿಥುನ ಪ್ರಾಣಿಗಳು ಪಕ್ಷಿಗಳನ್ನು ಕಾಣಬಹುದು.[1] ಕ್ರಮೇಣ ಆ ಚಿತ್ರಗಳಿಗೆ ನೈಸರ್ಗಿಕ ಬಣ್ಣಗಳನ್ನು ಹಚ್ಚಲಾಯಿತು. ಈ ಚಿತ್ರಗಳು ಅಂದಿನ ಸಂವಹನ ಕ್ರಿಯೆಗೆ ಕಾರಣವಾದವು. ಪ್ರಪಂಚದ ಯಾವುದೇ ದೇಶದ ಭಾಷೆಯನ್ನು ಅರ್ಥೈಸುವಲ್ಲಿ ಚಿತ್ರಗಳ ಪಾತ್ರ ಬಹಳ ಮುಖ್ಯವಾದುದು. ಅದಕ್ಕೆ ಸಾಕ್ಷಿ ಎಂಬಂತೆ ಇಂದಿಗೂ ಪ್ರಪಂಚದ ಅನೇಕ ದೇಶಗಳ ಭಾಷೆಗಳಲ್ಲಿ ಚಿತ್ರಗಳನ್ನು ಕಾಣಬಹುದಾಗಿದೆ. ಕಲಿಕೆಯಲ್ಲಿ ಚಿತ್ರಸಹಿತ ವಿದ್ಯಾಭ್ಯಾಸದಿಂದ ಯಾವುದೇ ವಿಷಯವನ್ನು ಸುಲಭವಾಗಿ ಅರ್ಥೈಸಬಹುದು. ಒಂದು ಚಿತ್ರದ ಸನ್ನಿವೇಶವನ್ನು ಯಾವುದೇ ದೇಶದವರು ಬರೆದರೂ ಪ್ರಪಂಚದ ಎಲ್ಲಾ ದೇಶದವರೂ ಅರ್ಥ ಮಾಡಿಕೊಳ್ಳಬಹುದು. ಈ ರೀತಿ ಕೇವಲ ಚಿತ್ರಕಲೆಯಿಂದ ಸಂವಹನ ಸಾಧ್ಯ. ಅದೇ ರೀತಿ ಭವಿಷ್ಯದಲ್ಲಿ ಅನ್ಯಗ್ರಹ ಜೀವಿಗಳು ಅಥವಾ ಏಲಿಯನ್ಸ್‌ನೊಂದಿಗೂ ಸಹ ಸಂವಹನ ನಡೆಸಬಹುದಾದ ಸಾಧ್ಯತೆಗಳಿವೆ. ಕಾರಣ ಅನಕ್ಷರಸ್ಥರಿಗೂ ಚಿತ್ರಕಲೆಯಿಂದ ವಿಷಯವನ್ನು ಅರ್ಥೈಸುವಾಗ ಅನ್ಯಗ್ರಹ ಜೀವಿಗಳಿಗೂ ಚಿತ್ರಕಲೆಯಿಂದ ವಿಷಯವನ್ನು ವಿನಿಮಯ ಮಾಡುವ ಅಥವಾ ಅರ್ಥೈಸುವ ಸಾಧ್ಯತೆಗಳಿರುತ್ತವೆ.

**ಸಾಂಕೇತಿಕ ಚಿತ್ರಕಲೆ**

ದೇಶದ ಏಕತೆಗಾಗಿ, ರಾಷ್ಟ್ರೀಯತೆಯನ್ನು ಪ್ರಚುರಪಡಿಸಲಿಕ್ಕಾಗಿ ಪ್ರಪಂಚದ ಅನೇಕ ದೇಶಗಳು Allegorry ಅಥವಾ ಸಾಂಕೇತಿಕ ಚಿತ್ರಕಲೆಯನ್ನು ರೂಪಿಸಿದರು. ಫ್ರಾನ್ಸಿನ 'ಮರೆಯನ್ನೆ', ಜರ್ಮನಿಯ 'ಜರ್ಮೇನಿಯ', ಭಾರತದಲ್ಲಿ 'ಅಭನೀಂದ್ರನಾಥ್ ಠ್ಯಾಗೂರ್‌ರವರು 'ಭಾರತ ಮಾತಾ' ಎಂಬ ಚಿತ್ರವನ್ನು ರೂಪಿಸಿ ಅದು ದೇಶವನ್ನು ಪ್ರತಿನಿಧಿಸುವಂತೆ ಪ್ರೇರೇಪಿಸಿದರು. ಅದೇ ರೀತಿ ಬಾವುಟಗಳು ಪ್ರಾಚೀನ ಕಾಲದಿಂದಲೂ ರಾಮಾಯಣ, ಮಹಾಭಾರತದ ಕಾಲದಿಂದಲೂ ಸಹ ನೋಡಬಹುದು. ಬಾವುಟಗಳು ಆ ಸಾಮ್ರಾಜ್ಯವನ್ನು ಪ್ರತಿನಿಧಿಸುತ್ತಿದ್ದವು. ಇಂದಿಗೂ ಸಹ ಆ ಬಾವುಟಗಳಲ್ಲಿ ವಿವಿಧ ಬಣ್ಣಗಳು, ಚಿತ್ರಗಳನ್ನು ನೋಡಿ ಆ ಬಾವುಟ ಯಾವ ದೇಶಕ್ಕೆ ಸೇರಿದೆ ಎಂಬುದನ್ನು ಸುಲಭವಾಗಿ ಗುರುತಿಸಬಹುದು. ಅದೇ ರೀತಿ ಶಿಕ್ಷಣ ಕ್ಷೇತ್ರಕ್ಕೆ ಪುಸ್ತಕದ ಚಿತ್ರ ಮತ್ತು ವಿದ್ಯಾ ದೇವತೆಯಾಗಿ ಸರಸ್ವತಿಯ ಚಿತ್ರದಿಂದ ಗುರುತಿಸಲಾಗುತ್ತದೆ. ಈ

ರೀತಿ ಯಾವುದೇ ವಿಷಯವನ್ನು ಅರ್ಥೈಸಲು ಭೌತಿಕ ಚಿತ್ರಗಳು ಬೇಕೇಬೇಕು. ಇದರಿಂದ ಸುಲಭವಾಗಿ ದೇಶಗಳ ಭಾವೈಕ್ಯತೆ, ಏಕತೆಯನ್ನು ಮೂಡಿಸಬಹುದಾಗಿದೆ.

**ಸೃಜನಾತ್ಮಕ ಚಿತ್ರಕಲೆ**

ಚಿತ್ರಕಲೆಯು ಕೇವಲ ಬಣ್ಣ ಮತ್ತು ಸೌಂದರ್ಯಕ್ಕೆ ಪ್ರಾಧಾನ್ಯತೆ ಕೊಟ್ಟಿಲ್ಲ. ಬದಲಿಗೆ ಆ ಚಿತ್ರಗಳ ಮೂಲಾರ್ಥಕ್ಕೂ ಬೆಲೆಯುಂಟು. ಉದಾಃ ಮೂರು ಕೋತಿಗಳ ಚಿತ್ರಗಳಲ್ಲಿ ಒಂದು ಕೋತಿ ಕಣ್ಣು ಮುಚ್ಚಿದಂತೆ, ಇನ್ನೊಂದು ಕಿವಿ ಮುಚ್ಚಿದಂತೆ, ಮತ್ತೊಂದು ಕೋತಿ ಬಾಯಿ ಮುಚ್ಚಿದಂತೆ ಚಿತ್ರಿಸಿದಾಗ ಅದರ ಅರ್ಥ ಗಾಂಧೀಜಿಯವರ ಹೇಳಿಕೆಯನ್ನು ಪ್ರಸ್ತುಪಡಿಸಿದಂತೆ. ಬಾಯಿ ಮುಚ್ಚಿದ ಕೋತಿ ಕೆಟ್ಟದ್ದನ್ನು ಮಾತನಾಡಬೇಡ, ಕಿವಿ ಮುಚ್ಚಿದರೆ ಕೆಟ್ಟದ್ದನ್ನು ಕೇಳಬೇಡ, ಕಣ್ಣು ಮುಚ್ಚಿದರೆ ಕೆಟ್ಟದ್ದನ್ನು ನೋಡಬೇಡ ಎಂಬರ್ಥವು ಚಿತ್ರಗಳ ಮುಖಾಂತರ ಹೇಳಿರುತ್ತಾರೆ. ಅದೇ ರೀತಿ ಮೂರು ಮನುಷ್ಯನ ಗೊಂಬೆಗಳ ಚಿತ್ರಗಳಿರುತ್ತವೆ. ಒಂದು ಗೊಂಬೆಯ ಕಿವಿಯಲ್ಲಿ ದಾರ ಹಾಕಿದರೆ ಅದು ಆ ಗೊಂಬೆಯ ಇನ್ನೊಂದು ಕಿವಿಯಲ್ಲಿ ಬರುತ್ತದೆ. ಇನ್ನೊಂದು ಗೊಂಬೆಯ ಕಿವಿಯಲ್ಲಿ ದಾರ ಹಾಕಿದರೆ ಅದು ಬಾಯಿಯ ಮುಖಾಂತರ ಹೊರಬರುತ್ತದೆ. ಮತ್ತೊಂದು ಗೊಂಬೆಯ ಚಿತ್ರದಲ್ಲಿ ಕಿವಿಯಲ್ಲಿ ದಾರ ಹಾಕಿದರೆ ಅದು ತಲೆಯಲ್ಲೆ ಸುತ್ತಿಕೊಳ್ಳುತ್ತದೆ. ಅಂದರೆ ಅದರ ಅರ್ಥ ಮೊದಲ ಚಿತ್ರದಲ್ಲಿ ಗೊಂಬೆಯಂತಹ ಮನುಷ್ಯರು ಸಮಾಜದಲ್ಲಿದ್ದರೆ ಅಂತಹ ದೇಶ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಕಾರಣ ಅವರು ಒಂದು ಕಿವಿಯಲ್ಲಿ ಕೇಳಿದ್ದನ್ನು ಇನ್ನೊಂದು ಕಿವಿಯಲ್ಲಿ ಬಿಡುತ್ತಾರೆ. ಎರಡನೆಯ ಗೊಂಬೆಯವರು ಒಂದು ಕಿವಿಯಲ್ಲಿ ಕೇಳಿದ್ದನ್ನು ಇತರರಿಗೆ ಹೇಳುತ್ತಾರೆ. ಇವರು ಒಂದನೆಯ ಗೊಂಬೆಗಿಂತ ಉತ್ತಮರೆನ್ನಬಹುದು. ಮೂರನೆಯ ಗೊಂಬೆಯವರು ಕೇಳಿದ ವಿಷಯವನ್ನು ತನ್ನಲ್ಲಿಯೇ ಗ್ರಹಿಸಿಕೊಂಡು ಅದರಂತೆ ನಡೆದುಕೊಳ್ಳುತ್ತಾರೆ. ಇಂತಹ ಜನ ಇರುವ ದೇಶ ಅಭಿವೃದ್ಧಿಗೆ ಪೂರಕವಾದುದಾಗಿರುತ್ತದೆ. ಚಿತ್ರಗಳಿಂದ ಅಂದಿನ ಸಂಸ್ಕೃತಿ, ಧಾರ್ಮಿಕತೆ, ಭಾವನೆ, ನೈಪುಣ್ಯತೆ, ಮೌಲ್ಯಗಳು ಮುಂತಾದವು ಸ್ಪಷ್ಟವಾಗಿ ತಿಳಿಯಬಹುದು. ಉದಾಃ ತುಮಕೂರು ಜಿಲ್ಲೆಯ ಸೀಬಿ ನರಸಿಂಹಸ್ವಾಮಿ ದೇವಾಲಯದ ಚಿತ್ರಗಳು.

**ಚಿತ್ರಕಲೆ ಮತ್ತು ವಿಜ್ಞಾನ**

ವಿಜ್ಞಾನದಲ್ಲಿ ಊಹಿಸಿದ್ದನ್ನು ನೋಡಲು, ಹೊಸ ಸೃಷ್ಟಿಯನ್ನು ನೋಡಲು ಚಿತ್ರಕಲೆಯ ಅಗತ್ಯತೆಯನ್ನು ಗುರುತಿಸಬಹುದು. ಚಿತ್ರದ ಮೂಲಕ ವೈಜ್ಞಾನಿಕ ಸೃಷ್ಟಿಯಲ್ಲಿ ಆಗಬಹುದಾದ ತೊಂದರೆಗಳನ್ನು ನಿವಾರಿಸಬಹುದಾಗಿದೆ. ಚಿತ್ರಕಲೆ ಇಲ್ಲದಿದ್ದರೆ ವಿಜ್ಞಾನ ಮಂಕಾಗುತ್ತದೆ. ಆಲ್ಬರ್ಟ್ ಐನ್‌ಸ್ಟೈನ್ ಪ್ರಕಾರ ವಿಜ್ಞಾನ ಮತ್ತು ಚಿತ್ರಕಲೆ ಎರಡು ಧ್ರುವ ಪ್ರದೇಶಗಳಿದ್ದಂತೆ. ಚಿತ್ರಕಲೆ ಸೃಜನಾತ್ಮಕವಾದುದು. ಈ ಸೃಜನಾತ್ಮಕತೆಯಿಂದ ವಿಜ್ಞಾನದಲ್ಲಿನ ವಿವಿಧ ಸೂತ್ರಗಳನ್ನು ಬಳಸಿ ವೈಜ್ಞಾನಿಕ ಅವಿಷ್ಕಾರಗಳಿಗೆ ಅನುವು ಮಾಡಿಕೊಡುವುದು ಚಿತ್ರಕಲೆ.

ಒಟ್ಟಿನಲ್ಲಿ ಚಿತ್ರಕಲೆಯ ಉದ್ದೇಶ ವಿಜ್ಞಾನಕ್ಕೆ ಸಂಬಂಧಿಸಿದಂತೆ ಈ ಪ್ರಪಂಚವನ್ನು ಅರ್ಥೈಸಿ ಅದ್ಭುತಗಳನ್ನು ಸೃಷ್ಟಿಸುವುದಾಗಿದೆ. ಲಿಯೋನಾರ್ಡೊ ಡಾವಿಂಚಿ ತನ್ನ ವೈಜ್ಞಾನಿಕ ಊಹೆಗಳಿಗೆ ಚಿತ್ರಕಲೆಯನ್ನು ಬಳಸಿದರು. ಚಾರ್ಲ್ಸ್ ಮೆಸ್ಸಿಯರ್ 18 ನೇ ಶತಮಾನದಲ್ಲಿ 110 ಕ್ಕೂ ಹೆಚ್ಚು ಚಿತ್ರಗಳನ್ನು

ತನ್ನ ಡೈರಿಯಲ್ಲಿ ಬರೆದುಕೊಂಡು ಅನೇಕ ಅವಿಷ್ಕಾರಗಳನ್ನು ಮಾಡಿರುವನು. Helley ಅನೇಕ ಗೆಲಾಕ್ಸಿಗಳನ್ನು, Clusters & Nebulac ಗಳನ್ನು ಅಧ್ಯಯನ ಮಾಡಿ, ರಾತ್ರಿ ವೇಳೆ ಆಕಾಶದಲ್ಲಿ ಹಾರಾಡುವ ಕಾಮೆಟ್‌ಗಳನ್ನು ಕಂಡುಹಿಡಿದನು. 20 ನೇ ಶತಮಾನದಲ್ಲಿ 'ಸರ್ರಿಯಲಿಸಂ' ಪಂಥದಲ್ಲಿ ಕಲಾವಿದನ ಊಹಾ ವಿಲಾಸಕ್ಕೆ ವಿಚಾರ ಸರಣಿ ಕನಸುಗಾರಿಕೆ ಮತ್ತು ಸುಪ್ತ ಭಾವನೆಗಳಿಗೆ ಅವಕಾಶವಿರುತ್ತದೆ. ಬುದ್ಧಿ ಪ್ರಚೋದಿತವಾದ ಅಥವಾ ಕೇವಲ ಸಾಂಪ್ರದಾಯಿಕ ವಿಚಾರಗಳನ್ನು ಅವಾಸ್ತವಿಕ ವಾತಾವರಣದಲ್ಲಿ ತಂದಿಟ್ಟು ತೋರಿಸಿ ಚಕಿತಗೊಳಿಸುವುದು.

ನಮ್ಮ ದೇಶದ ಪುರಾಣ ಕತೆಗಳಲ್ಲಿ ಬರುವ ಸ್ವರ್ಗ, ನರಕಗಳ ಕಲ್ಪನೆ, ನರಸಿಂಹ, ಗಣಪ, ಮತ್ಸ್ಯಾವತಾರ, ಯಕ್ಷ, ನಾಗ, ಕಿನ್ನರ, ಅಪ್ಸರೆ, ಮಾಂತ್ರಿಕ, ಭೂತ ಮುಂತಾದವು ಸರ್ರಿಯಲಿಸಂ ಕಲ್ಪನೆಗಳು. ಈ ವಿಚಾರವಾಗಿ ಭಾರತದ ಸಮಕಾಲೀನ ಕಲಾಕಾರರಾದ ಲಕ್ಷ್ಮಣ ಪೈ, ಭಿಕಾಸ್ ಭಟ್ಟಾಚಾರ್‌ಜೀ, ಪರಮ್‌ಜಿತ್ ಸಿಂಗ್ ಮುಂತಾದವರು ಚಿತ್ರಗಳನ್ನು ರಚಿಸಿದ್ದಾರೆ. ಕರ್ನಾಟಕದಲ್ಲಿ ಚಂದ್ರನಾಥ್ ಆಚಾರ್ಯ, ಸಿ. ಚಂದ್ರಶೇಖರ್, ಕೆ.ಆರ್. ಸುಬ್ಬಣ್ಣ, ಜಿ.ಎಂ.ಎಸ್. ಮಣಿ ಮುಂತಾದವರು ಚಿತ್ರಗಳನ್ನು ರಚಿಸಿದ್ದಾರೆ.

ಕರ್ನಾಟಕದ ಆಧುನಿಕ ಯುಗದ ಚಿತ್ರಕಲೆ ಹೊಸ ಕಾಲಕ್ಕನುಗುಣವಾಗಿ ಅದರ ಶಕ್ತಿ, ವ್ಯಾಪ್ತಿ ಮತ್ತು ವಿನ್ಯಾಸಗಳು ಬೆಳೆಯುವುದು ಅನಿವಾರ್ಯ. ಹಿಂದಿನ ಪರಂಪರೆಯನ್ನು ಅರಗಿಸಿಕೊಂಡು, ಹೊಸ ಪ್ರಭಾವವನ್ನು ತಿರಸ್ಕರಿಸದೆ ಕರ್ನಾಟಕದ ಚಿತ್ರಕಲೆ ಬೆಳೆಯುತ್ತಿದೆ. ಇಡೀ ಭಾರತದಲ್ಲಿಯೇ ಹೆಸರಾಂತ ಚಿತ್ರ ಕಲಾವಿದರಾದ ಕೆ. ವೆಂಕಟಪ್ಪನವರೇ ಇದಕ್ಕೆ ಉತ್ತಮ ಉದಾಹರಣೆ. ಅದೇ ರೀತಿ ಪ್ರಸ್ತುತ ಈ ರಂಗದಲ್ಲಿ ದುಡಿಯುತ್ತಿರುವ ಅನೇಕ ಕಲಾವಿದರು ಚಿತ್ರಕಲೆಯ ಕೀರ್ತಿಯನ್ನು ಬೆಳಗುತ್ತಿದ್ದಾರೆ.

**ಚಿತ್ರಕಲೆ ಮತ್ತು ಇತಿಹಾಸ**

ಪ್ರಾಚೀನ ಕಾಲದಿಂದಲೂ ನಾಣ್ಯಗಳ ಮೇಲೆ, ಶಾಸನಗಳ ಮೇಲೆ ಅನೇಕ ಚಿತ್ರಗಳನ್ನು ಕಾಣಬಹುದು. ಇದರಿಂದ ಸ್ಪಷ್ಟವಾದ ಇತಿಹಾಸ ರಚನೆಗೆ ನಾಣ್ಯಗಳ ಮೇಲಿನ ಚಿತ್ರಗಳು ಪ್ರಮುಖ ಆಧಾರಗಳಾಗುತ್ತವೆ. ಉದಾಹರಣೆಗೆ ವೀಣಾಪಾಣಿನಿಯಾದ ಸಮುದ್ರ ಗುಪ್ತನ ಚಿತ್ರ. ಅದೇ ರೀತಿ ವಿಜಯನಗರ ಕಾಲದಲ್ಲಿ ನಾಣ್ಯಗಳ ಮೇಲೆ ಗೂಳಿ, ಆನೆ, ಗಂಡಭೇರುಂಡ, ಶಿವ ಮತ್ತು ಶಕ್ತಿ ಕುಳಿತಿರುವ ಚಿತ್ರ, ಹನುಮಾನ್ ಮತ್ತು ಗರುಡನುಳ್ಳ ನಾಣ್ಯಗಳು, ವಿಷ್ಣುವಿನ ಚಿತ್ರವಿರುವ ನಾಣ್ಯಗಳು, ದುರ್ಗಾಮಾತೆಯ ಚಿತ್ರ, ಈ ರೀತಿ ನಾಣ್ಯಗಳ ಮೇಲಿನ ಚಿತ್ರಗಳಿಂದ ಯಾವ ರಾಜ ಆಳ್ವಿಕೆ ಮಾಡುತ್ತಿದ್ದರು? ಯಾವ ಧರ್ಮಕ್ಕೆ ಪ್ರಾಧಾನ್ಯತೆ ಇತ್ತು? ಮತ್ತು ಯಾವ ಲೋಹವನ್ನು ಬಳಸುತ್ತಿದ್ದರು? ಈ ಎಲ್ಲಾ ವಿಚಾರಗಳು ಸ್ಪಷ್ಟವಾಗಿ ತಿಳಿಯಬಹುದಾಗಿದೆ.

**ಚಿತ್ರಕಲೆ–ಶಿಲ್ಪಕಲೆ**

ಯಾವುದೇ ಲಲಿತಕಲೆಯಲ್ಲಿ ಪಾಂಡಿತ್ಯ ಪಡೆಯಬೇಕಾದರೆ ಮೊದಲು ಚಿತ್ರಕಲೆಯನ್ನು ಅಭ್ಯಾಸ ಮಾಡಲೇಬೇಕು. ಉದಾಃ ಅಮರಶಿಲ್ಪಿ ಜಕಣಾಚಾರಿ ಯಾವುದೇ ಶಿಲ್ಪಗಳನ್ನು ತಯಾರಿಸುವ ಮೊದಲು ಅದರ ರೇಖಾಚಿತ್ರಗಳನ್ನು ತಯಾರಿಸುತ್ತಿದ್ದರು. ಶ್ರೀ ಚನ್ನಕೇಶವ ದೇವಾಲಯ ಸಮುಚ್ಚಯವನ್ನು ಮೊದಲು ರೇಖಾಚಿತ್ರಗಳಲ್ಲಿ ತೋರಿಸುವಂತೆ ಹೊಯ್ಸಳೇಶ್ವರನಾದ ವಿಷ್ಣುವರ್ಧನ ಮತ್ತು ಶಾಂತಲಾದೇವಿ ಕೇಳಿದಾಗ

ಜಕಣಾಚಾರ್ಯರು ಒಂದು ರೀತಿಯ ಶಿಲ್ಪ ಸಾಮ್ರಾಜ್ಯವನ್ನೇ ಸೃಷ್ಟಿಸಿದಂತೆ ಅದ್ಭುತವಾದ ರೇಖಾಚಿತ್ರಗಳನ್ನು ಬರೆದರು. ಆ ಚಿತ್ರಗಳಲ್ಲಿ ದೇವಮಂದಿರದ ತಳಪಾಯವನ್ನೇ ಆಳೆತ್ತರಕ್ಕೇರಿಸಿ ತೋರಿಸುವ ಭವ್ಯತೆ ಕಾಣುತ್ತಿತ್ತು. ವಿಮಾನ ಗೋಪುರಗಳು, ಉಬ್ಬು ಶಿಲ್ಪಗಳುಳ್ಳ ಅತ್ಯದ್ಭುತ ಸಾಲುಕಂಬಗಳು, ಒಂದೊಂದು ಕಂಬಕ್ಕೂ ಬೇರೆ ಬೇರೆಯಾದಂತಹ ರೂಪುರೇಷೆಗಳನ್ನು ಚಿತ್ರಿಸಲಾಗಿತ್ತು. ಅದೊಂದು ಅದ್ಭುತ ನವ್ಯ ಕಲ್ಪನೆಯಾಗಿ ಆ ಚಿತ್ರಗಳು ಕಂಡುಬಂದಿತ್ತು. ಈ ರೀತಿ ಇಡೀ ದೇವಾಲಯಗಳನ್ನು ಮೊದಲು ಚಿತ್ರಗಳನ್ನು ಬರೆದು ನಂತರ ವಿಷ್ಣುವರ್ಧನ ಮತ್ತು ಶಾಂತಲಾದೇವಿಯವರಿಗೆ ಚಿತ್ರಗಳನ್ನು ತೋರಿಸಿ ಅನುಮತಿ ಪಡೆದು ದೇವಾಲಯ ನಿರ್ಮಿಸಿದರು. ಅಂದರೆ ಚಿತ್ರಕಲೆಗೂ ಶಿಲ್ಪಕಲೆಗೂ ಇರುವ ಬಿಡಿಸಲಾರದ ನಂಟನ್ನು ಗಮನಿಸಬಹುದಾಗಿದೆ. ಕ್ರಿ.ಶ.1818 ರಲ್ಲಿ ಫ್ರಾನ್ಸ್ ದೇಶದ ವಿಕ್ಟರ್ ಕಜಿನ್ ಎಂಬಾತನು **'ಕಲೆಗಾಗಿ ಕಲೆ'** ಎಂಬ ಪದ ಪ್ರಯೋಗ ಮಾಡಿದನು. 1840 ರ ದಶಕದಲ್ಲಿ ಈ ವಾದವು ಪುನರುಜ್ಜೀವನಗೊಂಡಿತು.

**ಚಿತ್ರಕಲೆ–ವಾಸ್ತುಶಿಲ್ಪ**

ಪ್ರಾಚೀನ ಕಾಲದಿಂದಲೂ ವಾಸದ ಮನೆ, ಸಾರ್ವಜನಿಕ ಕಟ್ಟಡ, ಅಣೆಕಟ್ಟು, ದೇವಾಲಯಗಳು, ಸ್ಮಾರಕಗಳು, ರಸ್ತೆಗಳು ಮತ್ತು ಇತರ ವಸ್ತುಗಳಿಂದ ವಾಹನ, ಕುರ್ಚಿ, ಮಂಚ, ಈ ರೀತಿ ಯಾವುದನ್ನೇ ತಯಾರಿಸಲು ಮೊದಲು ಅದರ ರೇಖಾಚಿತ್ರವನ್ನು ತಯಾರಿಸಿ ಅದರಂತೆ ಕಟ್ಟಡ ಕಟ್ಟುತ್ತಿದ್ದರು. ಉದಾಃ ಸರ್ ಎಂ. ವಿಶ್ವೇಶ್ವರಯ್ಯನವರಂತಹ ಪ್ರತಿಭಾವಂತರು ಯಾವುದೇ ಯೋಜನೆಯನ್ನು ಮೊದಲು ರೇಖಾಚಿತ್ರಗಳನ್ನು ತಯಾರಿಸಿ ಅದರಂತೆ ಅಣೆಕಟ್ಟುಗಳನ್ನು, ಚರಂಡಿ ವ್ಯವಸ್ಥೆಗಳನ್ನು, ಅವರ ಸುಪ್ರಸಿದ್ಧ ನೀರೆತ್ತುವ ಸ್ವಯಂಚಾಲಿತ ಗೇಟ್‌ಗಳನ್ನು ನಿರ್ಮಿಸಿದರು. ಈ ರೇಖಾಚಿತ್ರಗಳಿಲ್ಲದಿದ್ದರೆ ಇಡೀ ಕಟ್ಟಡವೇ ಕಟ್ಟಲು ಸಾಧ್ಯವಿರುವುದಿಲ್ಲ. ಯಾವುದೇ ಕಟ್ಟಡವನ್ನು ಮೊದಲು ಚಿತ್ರಕಲೆಯಲ್ಲಿ ರೂಪಿಸಿ ಕಟ್ಟಿದ್ದಲ್ಲಿ ಅದು ಯಶಸ್ವಿಯಾಗುತ್ತದೆ. ಇದರಿಂದ ಚಿತ್ರಕಲೆ ಎಷ್ಟು ಮಹತ್ವದ್ದು ಎಂದು ತಿಳಿಯಬಹುದಾಗಿದೆ.

**ಚಿತ್ರಕಲೆ – ನೃತ್ಯಕಲೆ**

ನೃತ್ಯವನ್ನು ಜೀವಂತವಾಗಿ ತೋರಿಸುವ ಕಲೆ ಚಿತ್ರಕಲೆ. ಪ್ರಾಚೀನ ಕಾಲ, ಮಧ್ಯಯುಗೀನ ಕಾಲ, ಆಧುನಿಕ ಯುಗದ ನೃತ್ಯ, ಪಾಶ್ಚಾತ್ಯ ನೃತ್ಯ, ಪ್ರಾಂತೀಯ ನೃತ್ಯ, ದೇಶೀಯ ನೃತ್ಯ ಹೀಗೆ ಯಾವುದೇ ಕಾಲದ ದೇಶದ, ಪ್ರದೇಶದ ನೃತ್ಯವನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ನೃತ್ಯವನ್ನು ಪರಿಚಯಿಸುವ ಕಲೆ ಚಿತ್ರಕಲೆ. ಚಿತ್ರಕಲೆಯಿಂದ ನೃತ್ಯಕಲೆ ಜೀವಂತಗೊಳ್ಳುತ್ತದೆ. ಚಿತ್ರಕಲೆಯಿಂದಲೇ ನೃತ್ಯಕಲೆ ತನ್ನ ಪ್ರಚಾರವನ್ನು ಪಡೆದುಕೊಳ್ಳುತ್ತದೆ. ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆ. ಚಿತ್ರಕಲೆಯಿಂದ ಸಂತೋಷದ ನೃತ್ಯ, ಯುದ್ಧ ನೃತ್ಯ, ಭಾವನಾತ್ಮಕ ನೃತ್ಯ ಎಂಬುದನ್ನು ಗುರುತಿಸಬಹುದು. ವಿವಿಧ ನೃತ್ಯದ ಭಂಗಿಗಳನ್ನು, ಅಲಂಕರಣವನ್ನು, ವಿವಿಧ ಭಾವನೆಗಳನ್ನು, ವಿವಿಧ ಬಣ್ಣಗಳಿಂದ ಕೂಡಿದ ಚಿತ್ರಗಳಿಂದ ಐತಿಹಾಸಿಕ ನೃತ್ಯ ಸಂಸ್ಕೃತಿಯನ್ನು ಚಿತ್ರಕಲೆಯು ಶ್ರೀಮಂತಿಕೆಗೊಳಿಸುತ್ತದೆ. ಚಿತ್ರಕಲೆ ಭಾಷಾತೀತವಾದುದು, ಧರ್ಮಾತೀತವಾದುದು. ಎಲ್ಲರಿಗೂ ಎಲ್ಲ ಕಾಲದಲ್ಲಿಯೂ ಅರ್ಥವಾಗುವಂತಹ ಗುಣವನ್ನು ಚಿತ್ರಕಲೆ ಹೊಂದಿರುವುದರಿಂದ ನೃತ್ಯಕಲೆಯನ್ನು ವಿಶ್ವವ್ಯಾಪಿಯನ್ನಾಗಿ ಮಾಡುವ ಕಲೆಯೆಂದರೆ ಚಿತ್ರಕಲೆ.

**ಚಿತ್ರಕಥೆ**

ಚಿತ್ರಗಳ ಮೂಲಕ ನಡೆದ ಕಥೆಯಾಗಿರಬಹುದು, ಊಹಾತ್ಮಕ ಕಥೆಯಾಗಿರಬಹುದು, ಅನ್ವರ್ಥಕ ಕಥೆ ಮುಂತಾದವುಗಳನ್ನು ಚಿತ್ರಕಥೆಯಲ್ಲಿ ಸೂಚಿಸಬಹುದಾಗಿದೆ. ಇಂತಹ ಸನ್ನಿವೇಶವನ್ನು ಭಾರತದ ಅಜಂತಾ ಗುಹೆಗಳಲ್ಲಿ, ಸೀಬಿ ನರಸಿಂಹಸ್ವಾಮಿ ದೇವಾಲಯದ ರಾಮಾಯಣ, ಮಹಾಭಾರತದ ಕಥೆ, ಶ್ರವಣಬೆಳಗೊಳದ ಶಾಂತಿನಾಥ ಬಸದಿಯಲ್ಲಿ ಕಾಣಬಹುದು. ಉದಾಃ ಶ್ರವಣಬೆಳಗೊಳದ ಶಾಂತಿನಾಥ ಬಸದಿಯು ಸುಮಾರು 12–13 ನೇ ಶತಮಾನದಲ್ಲಿ ನಿರ್ಮಾಣವಾದ ಜೈನ ಮಠದಲ್ಲಿ ಚಿತ್ರಕಲಾಕೃತಿಗಳ ಅಪೂರ್ವ ಭಂಡಾರವನ್ನು ಈಗಲೂ ಕಾಣಬಹುದು. ಈ ಮಠದ ಒಳಗೆ ಉತ್ತರ ದಿಕ್ಕಿನ ಗೋಡೆಯ ಮೇಲೆ ಪಾರ್ಶ್ವನಾಥನ ಸಮವಸರಣದ ಚಿತ್ರ ಪ್ರಮುಖವಾದ ಆಕರ್ಷಣೆಯಾಗಿದೆ. ನಂತರ ಪಶ್ಚಿಮ ದಿಕ್ಕಿಗೆ ನೋಡಿದಾಗ ಒಂದು ಮರ. ಅದರ ಬಳಿಯಲ್ಲಿ ಮತ್ತು ಅದರ ಮೇಲೆ ಆರು ಜನ ನಿಂತು ಕಾರ್ಯೋನ್ಮುಖರಾಗಿದ್ದಾರೆ. ಜೈನ ಸಿದ್ಧಾಂತದಲ್ಲಿ ಬರುವ ಆರು ಲೇಶ್ಯಗಳನ್ನು ನಿರೂಪಿಸುವ ಸಾಂಕೇತಿಕ ಚಿತ್ರಣ ಇಲ್ಲಿದೆ. ಅದರಲ್ಲಿ ಮೂರು ಲೇಶ್ಯಗಳು ಪುಣ್ಯಪ್ರದವಾದವು. ಇನ್ನುಳಿದ ಮೂರು ಪಾಪಕಾರಕವಾದವು. ಒಳಿತು ಕೆಡುಕುಗಳನ್ನು ಜೀವಕ್ಕೆ ಅಂಟಿಸಲು ಇವೇ ಮೂಲ ಕಾರಣಗಳು[1]. ಇವುಗಳಲ್ಲಿ ಪುಣ್ಯಪ್ರದವಾದ ಮತ್ತು ಒಳಿತಿಗೆ ಕಾರಣವಾದ ಲೇಶ್ಯವನ್ನು ಸೂಚಿಸಲು ಪೀತ ವರ್ಣ (Orange), ಪದ್ಮ ವರ್ಣ (Pink) ಮತ್ತು ಶುಕ್ಲ ವರ್ಣ (White) ಗಳನ್ನು ಬಳಸಲಾಗಿದೆ. ಪಾಪಕಾರಕವಾದ ಲೇಶ್ಯಗಳನ್ನು ಕೃಷ್ಣ, ನೀಲ ಮತ್ತು ಕಾಪೋತ (Gray) ವರ್ಣಗಳನ್ನು ಸೂಚಿಸುತ್ತವೆ. ಈ ಅಧಮ ಲೇಶ್ಯಗಳು ನರಕ ಜನ್ಮ, ಗಿಡ ಮರ, ಮತ್ತಿತರ ಪ್ರಾಣಿ ಜನ್ಮಕ್ಕೆ ಹೇತುವಾಗುತ್ತದೆ. ಮೊದಲ ಮೂರು ಲೇಶ್ಯಗಳು ಮಾನವ ಜನ್ಮಕ್ಕೂ ಅಲ್ಲಿಂದ ದೇವ ಜನ್ಮಕ್ಕೂ ಮತ್ತು ಕೊನೆಯಲ್ಲಿ ಮುಕ್ತಿಗೂ ಕಾರಣವಾಗುತ್ತವೆ. ಈ ವಿವಿಧ ಲೇಶ್ಯಗಳಿಂದ ಮಾನವನ ವರ್ತನೆಯಲ್ಲಾಗಬಹುದಾದ ವಿವಿಧ ಪ್ರತಿಕ್ರಿಯೆಗಳನ್ನು ಇಲ್ಲಿ ಚಿತ್ರ ಅರ್ಥವತ್ತಾಗಿ ನಿರೂಪಿಸಿದೆ. ಮಾವಿನ ಹಣ್ಣನ್ನು ಬಿಟ್ಟಿರುವ ಮರದ ಬಳಿ ನಿಂತು ಆ ಹಣ್ಣನ್ನು ಕತ್ತರಿಸವುದಕ್ಕೆ ಈ ಆರು ಜನರೂ ಪಡುವ ಪ್ರಯತ್ನದಲ್ಲಿ ಈ ಲೇಶ್ಯಗಳ ಪ್ರಭಾವವನ್ನು ಕಾಣುತ್ತೇವೆ. ಕಪ್ಪು ಲೇಶ್ಯದಿಂದ ಪ್ರಭಾವಿತನಾದ ವ್ಯಕ್ತಿ ಹಣ್ಣಿಗಾಗಿ ಇಡೀ ಮರವನ್ನೇ ಬುಡಮೇಲು ಮಾಡುತ್ತಿದ್ದಾನೆ. ನೀಲಿ ಲೇಶ್ಯದ ಪ್ರಭಾವಕ್ಕೆ ಒಳಗಾದವನು ಮರದ ಕಾಂಡವನ್ನು ಕತ್ತರಿಸುತ್ತಿರುವುದು ಕಾಣುತ್ತದೆ. ಕಪೋತ ವರ್ಣದ ಲೇಶ್ಯ ಆ ಮರದ ದೊಡ್ಡ ದೊಡ್ಡ ಕೊಂಬೆಗಳನ್ನು ಕತ್ತರಿಸತೊಡಗಿರುವನು. ಆದರೆ ಉತ್ತಮ ಲೇಶ್ಯದ ಮೊದಲನೆ ಕಿತ್ತಲೆ ವರ್ಣದ ಲೇಶ್ಯಕ್ಕೆ ಬಳಿಗಾದವನ್ನು ಚಿಕ್ಕ ಚಿಕ್ಕ ಕೊಂಬೆಗಳನ್ನು ಕತ್ತರಿಸುತ್ತಿರುವನು. ಎರಡನೆಯ **ಪದ್ಮ** ಲೇಶ್ಯದವನು ಕೇವಲ ಹಣ್ಣುಗಳನ್ನು ಕೀಳುತ್ತಿದ್ದಾನೆ. ಕೊನೆಯ ಉತ್ತಮವಾದ **ಶುಕ್ಲ** ವರ್ಣದ ಲೇಶ್ಯದವರು ಕೆಳಗೆ ಬಿದ್ದ ಹಣ್ಣನ್ನು ಎತ್ತಿಕೊಳ್ಳುವುದರಲ್ಲಿ ಮಾತ್ರ ತೃಪ್ತನಾಗುವಂತೆ ಕಾಣುತ್ತಿದೆ. ಹೀಗೆ ಆರು ಲೇಶ್ಯಗಳಿಗೆ ಒಳಗಾದ ವ್ಯಕ್ತಿಗಳ ಮನೋಧರ್ಮವನ್ನು ಅರ್ಥವತ್ತಾಗಿ ಈ ಚಿತ್ರ ನಿರೂಪಿಸಿದೆ. ಈ ಚಿತ್ರಗಳು ಸರ್ವ ಕಾಲಕ್ಕೂ ನೀತಿ ಬೋಧೆಯನ್ನು ಮಾಡುವಂತಹ ಚಿತ್ರಕಥೆಗಳಾಗಿವೆ.

[1] ದಿನಪತ್ರಿಕೆ: ವಿಜಯಕರ್ನಾಟಕ. ದಿನಾಂಕ 14/01/2023

**ಚಿತ್ರಕಲೆ ಮತ್ತು ಸಂಗೀತ**

ಸಂಗೀತಗಾರರು ಹಾಡಿದ ರಾಗಗಳು ಶ್ರಾವಕರ ಮನಸ್ಸಿನ ಮೇಲೆ ಮೂಡಿಸುವ ಭಾವಗಳನ್ನು ತಮ್ಮ ಕುಂಚದಿಂದ ಚಿತ್ರಗಾರರು ಪ್ರೇಕ್ಷಕರ ಮನಸ್ಸಿನಲ್ಲಿ ಮೂಡುವಂತೆ ವರ್ಣಚಿತ್ರಗಳನ್ನು ರಚಿಸುವರು. ಇದಕ್ಕೆ ಸಂಗೀತ ರಾಗಗಳ ಹಾರ ಅಥವಾ ರಾಗಮಾಲ ಚಿತ್ರಗಳು ಎನ್ನುತ್ತಾರೆ. ವರ್ಣ ಮತ್ತು ಧ್ವನಿ, ಮನಸ್ಸಿನಲ್ಲಿ ರಸಭಾವನೆಗಳನ್ನುಂಟು ಮಾಡುವುದರಲ್ಲಿ ಕೆಲವು ಬಣ್ಣ ಮತ್ತು ಧ್ವನಿಗಳಲ್ಲಿ ಸಮಾನ ಗುಣಗಳಿವೆ ಎಂಬುದನ್ನು ವಿದೇಶಗಳಲ್ಲಿ ಆಧುನಿಕ ವಿಜ್ಞಾನಿಗಳು ಒಪ್ಪಿ ತತ್ಸಂಬಂಧ ಶೋಧನೆಗಳನ್ನು ಮಾಡುತ್ತಿರುವರು. ಯಾವ ವರ್ಣ ವಿನ್ಯಾಸಗಳು ಯಾವ ರಾಗ ಭಾವನೆಗಳಿಗೆ ಸಮ ಎಂದು ತಿಳಿಯುವ ಹಲವು ಪ್ರಯೋಗಗಳನ್ನು ಮಾಡಿದ್ದಾರೆ. ಆ ದಿಶೆಯಲ್ಲಿ ಶೋಧಿಸುತ್ತಿರುವ ಆಧುನಿಕರಲ್ಲಿ ಅಮೆರಿಕಾದ ಥಾಮಸ್, ವಿಲ್‌ಫ್ರೆಡ್‌ನೂ ಸಹ ಒಬ್ಬರಾಗಿದ್ದಾರೆ. ಅವರಿಗಿಂತ ಹಿಂದಿನವರು ಸರಿಸಮಾನವೆಂದು ತೋರಿದ ಧ್ವನಿ ಮತ್ತು ವರ್ಣಗಳನ್ನು ಜೊತೆಗೂಡಿಸಿ ಪ್ರದರ್ಶಿಸಿದ್ದರು. ಅದಕ್ಕೆ Glarrilux ಎಂದು ಹೆಸರಿಸಲಾಗಿದೆ. ಭಾರತದಲ್ಲಿ ರಾಗಮಾಲಾ ಚಿತ್ರಗಳು ಮೂರು ಶತಮಾನಗಳ ಹಿಂದೆ ಇಂತಹುದೇ ಒಂದು ಪ್ರಯೋಗ ನಡೆದಿತ್ತೆಂದರೆ ನಮ್ಮ ಲಲಿತಕಲೆಗಳ ಪ್ರಾಚೀನ ಪಾಂಡಿತ್ಯದ ಪರಂಪರೆಯನ್ನು ಮೆಚ್ಚಲೇಬೇಕಾಗಿದೆ. ಈ ರಾಗಮಾಲಗಳಲ್ಲಿ ಮೆಚ್ಚುಗೆಯ ಒಂದು ರಾಗವು **'ಭೈರವಿ'** ಆಗಿದೆ. ಅದರಲ್ಲಿ ಕನ್ಯೆಯೊಬ್ಬಳು ತನ್ನ ಪ್ರಿಯಕರನಿಗಾಗಿ ಧ್ಯಾನಮಗ್ನಳಾದಂತೆ ಚಿತ್ರಿಸಲಾಗಿದೆ. ಒಬ್ಬ ಲಲನೆಯು ತನ್ನ ಪ್ರಿಯತಮನ ಪ್ರೇಮ ಪ್ರಾಪ್ತಿಗಾಗಿ ಮಂದಿರದಲ್ಲಿ ದೇವರ ಪೂಜೆ ಮಾಡುತ್ತಿದ್ದಾಳೆ. ದೇವರಿಗೆ ಪುಷ್ಪಮಾಲೆಯನ್ನು ಸಮರ್ಪಿಸುವಂತಿದೆ. ಸಖಿಯರು ವಾದ್ಯವಾದನಗಳನ್ನು ನುಡಿಸುತ್ತಿದ್ದಾರೆ. ವಸಂತರಾಗವನ್ನು ಕೊಳಲನ್ನೂದುವ ಕೃಷ್ಣನು ಗೋಪಿಕೆಯರೊಡನೆ ವಿನೋದವಾಡುತ್ತಿರುವಂತೆ ಚಿತ್ರಿಸಲಾಗಿದೆ. ಹೀಗೆ ರಾಗಮಾಲ ಚಿತ್ರಗಳು ಸಂಗೀತ, ಸಾಹಿತ್ಯ ಮತ್ತು ಚಿತ್ರಗಳನ್ನು ಒಂದಾಗಿಸುತ್ತಿವೆ. ಪ್ರೇಮ, ವಿರಹ, ವಾತ್ಸಲ್ಯ, ಸಂಭ್ರಮ ಯಾವುದಾದರೂ ರಸಭಾವವನ್ನು ಮೂಡಿಸಬಲ್ಲವು.

**ಚಿತ್ರಕಲೆ ಮತ್ತು ಕಾವ್ಯ**

ಭಾರತದ ಆದಿ ಕಾವ್ಯವಾದ ರಾಮಾಯಣದ ಪ್ರಮುಖ ಚಿತ್ರಕಲೆಯನ್ನು ದೇಶದಾದ್ಯಂತ ಅನೇಕ ದೇವಾಲಯಗಳಲ್ಲಿ ನೋಡಬಹುದು. ಕರ್ನಾಟಕದಲ್ಲಿ ತುಮಕೂರು ಜಿಲ್ಲೆಯ ಕೆರೆಗೋಡಿ ರಂಗಾಪುರದಲ್ಲಿ ಶ್ರೀ ಲಕ್ಷ್ಮಿನಾರಾಯಣ ದೇವಸ್ಥಾನದ ಮೇಲ್ಛಾವಣಿಗೆ ರಾಮಾಯಣದ ಪ್ರಮುಖ ದೃಶ್ಯಗಳನ್ನು ಅದ್ಭುತವಾಗಿ ಚಿತ್ರಿಸಲಾಗಿದೆ. ಈ ಚಿತ್ರಗಳಲ್ಲಿ ರಾಮ, ಲಕ್ಷ್ಮಣ, ಸೀತೆ, ಹತ್ತು ತಲೆಗಳುಳ್ಳ ರಾವಣಾಸುರ, ಸೀತಾಪಹರಣ ದೃಶ್ಯಗಳು, ಆಂಜನೇಯ, ಯಕ್ಷ, ಯಕ್ಷಿಣಿಯರ ಚಿತ್ರ, ಜಟಾಯುವಿನ ಚಿತ್ರ ಮುಂತಾದವುಗಳನ್ನು ನೋಡಬಹುದಾಗಿದೆ. ಇವು ಟಿಪ್ಪು ಸುಲ್ತಾನ್ ಕಾಲದ ಚಿತ್ರಗಳಾಗಿವೆ.[2]

ಅದೇ ರೀತಿ ಮಹಾಭಾರತದ ಚಿತ್ರಕಲೆಯನ್ನು ತುಮಕೂರಿನಿಂದ ಸುಮಾರು 10 ಕಿ.ಮೀ. ದೂರದಲ್ಲಿ ಸೀಬಿ ನರಸಿಂಹಸ್ವಾಮಿ ದೇವಾಲಯದಲ್ಲಿ ಕಾಣಬಹುದು. ಇದರಲ್ಲಿ ಶ್ರೀಕೃಷ್ಣನು ರಥವನ್ನು ಓಡಿಸುತ್ತಿರುವ, ಅರ್ಜುನನು ಯುದ್ಧ ಸನ್ನದ್ಧನಾಗಿರುವ ಚಿತ್ರಗಳನ್ನು, ಭೀಮ, ದುರ್ಯೋಧನ, ಕುಂತಿದೇವಿ, ನಕುಲ,

[2] ಚಂದ್ರಶೇಖರ ಎನ್. (ಸಂ). ತುಮಕೂರು ಜಿಲ್ಲೆ ಗೆಜೆಟಿಯರ್, ಗವರ್ನಮೆಂಟ್ ಆಫ್ ಕರ್ನಾಟಕ, ಪುಟ.867

ಸಹದೇವರ ಚಿತ್ರಗಳು, ಕುರುಕ್ಷೇತ್ರದ ಯುದ್ಧ ದೃಶ್ಯಗಳನ್ನು ಕಾಣಬಹುದಾಗಿದೆ. ಅದೇ ರೀತಿ ಭಾಗವತವನ್ನು ಸಹ ಚಿತ್ರಕಲೆಯ ಮೂಲಕ ವಿವರಿಸಲಾಗಿದೆ. ಇದರಂತೆ ಮುಮ್ಮಡಿ ಕೃಷ್ಣದೇವರಾಯನ ಕಾಲದಲ್ಲಿ ಮೈಸೂರಿನ ಜಗನ್ಮೋಹನ ಚಿತ್ರಶಾಲೆಯಲ್ಲಿ ಕುರುಕ್ಷೇತ್ರದ ರಣರಂಗದ ದೃಶ್ಯ. ಇದು 1888 ರಲ್ಲಿ ಕಲಾವಿದ ತಿಪ್ಪಾಜಿಯವರು ರಚಿಸಿದ ಚಿತ್ರಕಲೆಯಾಗಿದೆ. ಇದರೊಂದಿಗೆ ಕೃಷ್ಣ ರಣರಂಗದಲ್ಲಿ ಅರ್ಜುನನಿಗೆ ಗೀತೋಪದೇಶ ಮಾಡುತ್ತಿರುವ ಚಿತ್ರವೂ ಸಹ ಅದ್ಭುತವಾಗಿದೆ.

**ಚಿತ್ರಕಲೆ ಮತ್ತು ಚಲನಚಿತ್ರ**

ಜಗತ್ತಿನ ಜನಪದ ವರ್ಣಚಿತ್ರಕಲಾ ಪ್ರಪಂಚಕ್ಕೆ ಭಾರತದ ಅಮೂಲ್ಯ ಕೊಡುಗೆ ಎಂದರೆ ತೊಗಲು ಗೊಂಬೆ ಚಿತ್ರಕಲೆ. ತೆರೆಯ ಹಿಂದೆ ವರ್ಣರಂಜಿತ ಮಾಯಾಲೋಕವನ್ನು ಸೃಷ್ಟಿಸುವ ಅದ್ಭುತ ಕೈಚಳಕ ಕಲೆ ಇದಾಗಿದೆ. ಈ ಕಲೆ ಕೇವಲ ಒಬ್ಬ ವ್ಯಕ್ತಿಗೆ ಸೀಮಿತವಾಗಿರದೆ ಇಡೀ ಕುಟುಂಬದ ಜನರನ್ನು ತೊಡಗಿಸಿಕೊಳ್ಳುವ ಜನಸಮುದಾಯದ ಕಲೆ. ತೊಗಲಿನಲ್ಲಿ ವಿವಿಧ ರೀತಿಯ ಚಿತ್ರಗಳನ್ನು ಕೊರೆದು ವಿವಿಧ ರೀತಿಯ ವರ್ಣಲೇಪನ ಮಾಡಿ ರಂಗದ ಮೇಲೆ ರಾತ್ರಿ ಹೊತ್ತು ದೀಪದ ಬೆಳಕಿನಲ್ಲಿ ಹಿಂದೆ ವಾದ್ಯಮೇಳಗಳೊಂದಿಗೆ ವಿವಿಧ ಕಥಾನಕಗಳನ್ನು ಆಡಿಸುವ ಆಟವೇ ತೊಗಲು ಗೊಂಬೆಯಾಟ. ಪ್ರಪಂಚದಾದ್ಯಂತ ಈ ಆಟವನ್ನು **'ಷಾಡೊ ಪಪೆಟ್ ಶೋ'** ಎಂದು ಕರೆಯುತ್ತಾರೆ. ಇದರ ಸೃಜನಾತ್ಮಕ ರೂಪವೇ ಇಂದಿನ ಚಲನಚಿತ್ರಗಳಾಗಿವೆ ಅಥವಾ ಸಿನಿಮಾಗಳಾಗಿವೆ. ನಂತರದಲ್ಲಿ ಚಲನಚಿತ್ರಗಳು ಅಭಿವೃದ್ಧಿ ಹೊಂದಿದ ಮೇಲೆ ಚಿತ್ರದ ನಾಯಕ, ನಾಯಕಿಯರ ಮತ್ತು ಪ್ರಮುಖ ನಟರ, ಪ್ರಮುಖ ದೃಶ್ಯಗಳ ಚಿತ್ರಗಳನ್ನು ರಚಿಸಿ ದೊಡ್ಡ ದೊಡ್ಡ ಪೋಸ್ಟರ್‌ಗಳನ್ನು ಹಾಕುವುದರಿಂದ ಪ್ರಚಾರ ಹೆಚ್ಚಾಗಿ ಅದರ ಯಶಸ್ಸಿಗೆ ಕಾರಣವಾಗುತ್ತಿರುವುದು ಚಿತ್ರಕಲೆಯಿಂದ.

ಈ ರೀತಿ ಚಿತ್ರಕಲೆ ಪುರಾತನವಾದುದು. ಅಷ್ಟೇ ಮಹತ್ವವನ್ನು ಪಡೆದಿದೆ. ಇತರ ಅನೇಕ ವಿಷಯಗಳಾದ ಶಿಲ್ಪಕಲೆ, ನೃತ್ಯ, ಸಂಗೀತ, ಕಾವ್ಯ, ನಾಟಕ, ಚಲನಚಿತ್ರ, ವಿಜ್ಞಾನ, ಇತಿಹಾಸ ಇನ್ನು ಅನೇಕ ವಿಷಯಗಳ ಅರ್ಥೈಸುವಿಕೆಯಲ್ಲಿ ಸಹಾಯಕವಾಗಿದೆ. ಭವಿಷ್ಯದಲ್ಲಿಯೂ ಅನೇಕ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಚಿತ್ರಕಲೆ ಅತ್ಯವಶ್ಯಕವಾಗಲಿದೆ.

**ಪರಾಮರ್ಶನ ಗ್ರಂಥಳು**


- ಚೂಡಾಮಣಿ ನಂದಗೋಪಾಲ್. *ಶಿಲೆ ಮತ್ತು ಕಲೆ.*
- ಜಮುನ ಎಂ. (ಸಂ.). (2007). ಯಲಹಂಕ ನಾಡಪ್ರಭುಗಳು. (ವಾಸ್ತುಶಿಲ್ಪ ಮತ್ತು ಶಿಲ್ಪಕಲೆ) ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.
- ಸಿದ್ದಾಚಾರ್. ಪಿ.ಎಸ್. (2021). *ಅಮರಶಿಲ್ಪಿ ಐತಿಹ್ಯ ಕಥಾನಕ ಕೃತಿ.* ಕವಿಮಿತ್ರ ಪ್ರಕಾಶನ.
- ತಿಪ್ಪೇರುದ್ರಸ್ವಾಮಿ ಎಚ್. *ಕರ್ನಾಟಕದ ಸಾಂಸ್ಕೃತಿಕ ಸಮೀಕ್ಷೆ.* ಡಿ.ವಿ.ಕೆ. ಮೂರ್ತಿ.
- ತಿಪ್ಪೇಸ್ವಾಮಿ, ಪಿ.ಆರ್. *ಕಲಾಕೋಶ.* ಕರ್ನಾಟಕ ಲಲಿತಕಲಾ ಅಕಾಡೆಮಿ.